## ಕರ್ನಾಟಕ ಲೋಕಸೇವಾ ಆಯೋಗ

ಸಂಖ್ಯೆ:ಪಿಎಸ್‌ಸಿ 2442 ಇ(1)/2024-25

ಲೋಕಸೇವಾ ಆಯೋಗದ ಕಛೇರಿ,
"ಉದ್ಯೋಗ ಸೌಧ"
ಬೆಂಗಳೂರು, ದಿನಾಂಕ: 20-01-2025.

## ::ಪತ್ರಿಕಾ ಪ್ರಕಟಣೆ::

ಕರ್ನಾಟಕ ಲೋಕಸೇವಾ ಆಯೋಗವು ಅಧಿಸೂಚನೆ ಸಂಖ್ಯೆ: ಪಿಎಸ್‌ಸಿ/1639/ಇ(1)/2024-25, ದಿನಾಂಕ:18-09-2024ರಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿನ ಹೈದ್ರಾಬಾದ್-ಕರ್ನಾಟಕ ವೃಂದದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ಗ್ರೇಡ್-1) ಗ್ರೂಪ್ 'ಎ' ವೃಂದದ 12 ಹುದ್ದೆಗಳಿಗೆ ಮತ್ತು ಅಧಿಸೂಚನೆ ಸಂಖ್ಯೆ: ಪಿಎಸ್‌ಸಿ/1640/ಇ(1)/2024-25, ದಿನಾಂಕ:18-09-2024ರಲ್ಲಿ ಉಳಿಕೆ ಮೂಲ ವೃಂದದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ಗ್ರೇಡ್-1) ಗ್ರೂಪ್ 'ಎ' ವೃಂದದ 30 ಹುದ್ದೆಗಳಿಗೆ ಅಧಿಸೂಚನೆಗಳನ್ನು ಹೊರಡಿಸಿರುತ್ತದೆ. ಪ್ರಸ್ತುತ ಸದರಿ ಇಲಾಖೆಯವರು ಸಲ್ಲಿಸಿರುವ ಪ್ರಸ್ತಾವನೆಯನ್ವಯ ಸದರಿ ಎರಡೂ ವೃಂದದ ಹುದ್ದೆಗಳಿಗೆ ಸೇವಾ ನಿರತ ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ಸಲುವಾಗಿ ತಿದ್ದುಪಡಿ (RPC & HK) ಅಧಿಸೂಚನೆಗಳನ್ನು ದಿನಾಂಕ:20-01-2025ರಂದು ಹೊರಡಿಸಿ, ಸೇವಾ ನಿರತ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ದಿನಾಂಕ:20-01-2025 ರಿಂದ 03-02-2025ರವರೆಗೆ ಅವಕಾಶ ಕಲ್ಪಿಸಲಾಗಿರುತ್ತದೆ. ಸದರಿ ತಿದ್ದುಪಡಿ (RPC & HK) ಅಧಿಸೂಚನೆಗಳನ್ನು ಆಯೋಗದ ಅಂತರ್ಜಾಲದಲ್ಲಿ http://kpsc.kar.nic.in/notificationನಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಲಾಗಿರುತ್ತದೆ.

ಕಾರ್ಯದರ್ಶಿಯವರ ಆದೇಶದ ಮೇರೆಗೆ,

ಸಹಿ/-

ಉಪ ಕಾರ್ಯದರ್ಶಿ,
ಪರೀಕ್ಷಾ ಶಾಖೆ-1,
ಕರ್ನಾಟಕ ಲೋಕಸೇವಾ ಆಯೋಗ.